ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ|| ವೈ.ಎ. ನಾರಾಯಣ ಸ್ವಾಮಿ ರವರು ಕರ್ನಾಟಕ ರಾಜ್ಯ ಉಗ್ರಾಣ ನಿಗಮದಲ್ಲಿ ಉಗ್ರಾಣವನ್ನು ನಿರ್ಮಿಸಿ ರೈತರಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದ ಜವಾಬ್ದಾರಿ ಆಗಿರುತ್ತದೆ. ರೈತರು ಬೆಳೆದ ಬೆಳೆಯನ್ನು ಹೆಚ್ಚಿನ ಬೆಲೆಗೆ ಮಾರಲು, ಧಾನ್ಯಗಳನ್ನು ಸಂರಕ್ಷಿಸಲು ಮತ್ತು ರೈತರ ಲಾಭ ದ್ವಿಗುಣಗೊಳಿಸಲು, ಉಗ್ರಾಣ ನಿಗಮದಿಂದ ಅತಿ ಹೆಚ್ಚಿನ ಉಗ್ರಾಣಗಳನ್ನು ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಆದರೆ ಕಳೆದ 5-ವರ್ಷಗಳಲ್ಲಿ ಉಗ್ರಾಣ ನಿಗಮದಲ್ಲಿ ನಿರ್ಮಿಸಲಾಗಿರುವ ಉಗ್ರಾಣಗಳು ಹಳಿತಪ್ಪಿ ಗ್ರಹಣ ಹಿಡಿದು ನೂರಾರು ಕೋಟಿ ರೂ ಬಡ್ಡಿ ಹಾಗೂ ಅಪೂರ್ಣವಾದ ಉಗ್ರಾಣಗಳು ರೈತರಿಗೆ ಶಾಪವಾಗಿ ಪರಿಣಿಸಿರುವ ವಿಚಾರದ ಬಗ್ಗೆ ನಿಯಮ-72 ರಡಿಯಲ್ಲಿ ಕೋರಿರುವ ಮಾಹಿತಿ:-

- ರಾಜ್ಯಾದ್ಯಂತ ರೈತರು ಬೆಳೆದ ವ್ಯವಸಾಯ ಉತ್ಪನ್ನಗಳನ್ನು ಸಂಗ್ರಹಿಸಲು ಕೃಷಿ, ರೇಷ್ಮೆ, ತೋಟಗಾರಿಕೆ ಇಲಾಖೆಗಳ ಜಮೀನುಗಳನ್ನು 30 ವರ್ಷಗಳ ಅವಧಿಗೆ ಮುಫತ್ತಾಗಿ ಲೀಸ್ ಆಧಾರದ ಮೇಲೆ ಪಡೆದು ಉಗ್ರಾಣಗಳನ್ನು ನಿರ್ಮಿಸಲಾಗುತ್ತಿದೆ.

- 11.14 ಲಕ್ಷ ಮೆ.ಟನ್ ಸಾಮರ್ಥ್ಯದ ಉಗ್ರಾಣ ಮಳಿಗೆಗಳನ್ನು ಹಾಗೂ ಹಾಲಿ ಇರುವ 89 ಹಳೆಯ ಉಗ್ರಾಣ ಕೇಂದ್ರಗಳಿಗೆ ಮೂಲ ಸೌಕರ್ಯ ಕಾಮಗಾರಿಗಳನ್ನು ಒಟ್ಟು ಮೊತ್ತ ರೂ. 795.97 ಕೋಟಿಗಳಲ್ಲಿ ಗುತ್ತಿಗೆದಾರರಿಗೆ ದಿನಾಂಕ: 17.05.2016 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.

- ಪ್ರಸ್ತುತ 9.24 ಲಕ್ಷ ಮೆ.ಟನ್ ಸಾಮರ್ಥ್ಯದ 163 ಉಗ್ರಾಣಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಪೈಕಿ 4.70 ಲಕ್ಷ ಮೆ.ಟನ್ ಸಾಮರ್ಥ್ಯದ 87 ಉಗ್ರಾಣಗಳನ್ನು ಪೂರ್ಣಗೊಳಿಸಲಾಗಿರುತ್ತದೆ, ಉಳಿದ 4.54 ಲಕ್ಷ ಮೆ.ಟನ್ ಸಾಮರ್ಥ್ಯದ 76 ಉಗ್ರಾಣಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

- 89 ಕೇಂದ್ರಗಳ ಮೂಲ ಸೌಕರ್ಯ ಕಾಮಗಾರಿಗಳ ಪೈಕಿ 40 ಕೇಂದ್ರಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿದ 49 ಕೇಂದ್ರಗಳಲ್ಲಿ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

- ಕಾಮಗಾರಿಗಳ ಬಿಲ್ಲುಗಳ ವಿಳಂಬ ಪಾವತಿ, ಪ್ರೈಸ್ ಎಸ್ಕಲೇಷನ್ ಇತ್ಯಾದಿ ಕಾರಣಗಳಿಂದಾಗಿ ದಿನಾಂಕ: 28.01.2019 ರಂದು ಮಧ್ಯಸ್ಥಿಕೆ ಪ್ರಕರಣ ದಾಖಲು ಮಾಡಿರುವ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

- ಈ ಕಾಮಗಾರಿಯ ಅನುಷ್ಠಾನ ಕುರಿತು ದಿನಾಂಕ : 29.08.2019 ರಂದು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಯಿತು.

- ಈ ಯೋಜನೆಯ ಕೇಂದ್ರವಾರು ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯ ವಲಯವಾರು ಅಭಿಯಂತರರು ಪರಿವೀಕ್ಷಣೆ ಮಾಡಿ ಗುತ್ತಿಗೆದಾರರು ನಿರ್ಮಾಣ ಮಾಡಿರುವ ವಾಸ್ತವಿಕ ವೆಚ್ಚ ಹಾಗೂ ಬಾಕಿ ಉಳಿದಿರುವ ಕಾಮಗಾರಿಗಳಿಗೆ ಭರಿಸಬೇಕಾದ ಪರಿಷ್ಕೃತ ಅಂದಾಜನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

- ವಲಯವಾರು ಅಭಿಯಂತರರು ಪರಿವೀಕ್ಷಣೆ ಮಾಡಿ ಕಾಮಗಾರಿಗಳ ನಿರ್ಮಾಣದ ವಾಸ್ತವಿಕ ವೆಚ್ಚ ರೂ. 678.51 ಕೋಟಿ ಮತ್ತು ಉಳಿಕೆ ಕಾಮಗಾರಿಗಳಿಗೆ ಭರಿಸಬೇಕಾದ ವೆಚ್ಚ ರೂ. 183.86 ಕೋಟಿ ಒಟ್ಟು ಮೊತ್ತ ರೂ. 862.37 ಪರಿಷ್ಕೃತ ಅಂದಾಜನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಸಲಹಾ ಮತ್ತು ಅಂದಾಜು ಪಟ್ಟಿ ಪರಿಶೀಲನಾ ಸಮಿತಿಯು ದಿನಾಂಕ : 19.01.2021 ರಂದು ಅನುಮೋದಿಸಿರುತ್ತಾರೆ.

➢ ಸದರಿ ಗುತ್ತಿಗೆದಾರರಿಗೆ ಈಗಾಗಲೇ ರೂ. 612.18 ಕೋಟಿಗಳನ್ನು ದಿನಾಂಕ : 29.09.2016 ರಿಂದ 04.05.2019 ರವರೆಗೆ ವಿವಿಧ ದಿನಾಂಕಗಳಲ್ಲಿ ಪಾವತಿ ಮಾಡಲಾಗಿರುತ್ತದೆ.

➢ ನಿವೃತ್ತ ನ್ಯಾಯಮೂರ್ತಿ ಶ್ರೀ. ಸಂತೋಷ್ ಹೆಗ್ಡೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ :25.03.2019 ರಂದು ಆರ್ಬಿಟ್ರೇಶನ್ ಟ್ರಿಬ್ಯೂನಲ್ ರಚನೆ ಮಾಡಲಾಯಿತು.

➢ ಕಾಮಗಾರಿಯ ಅನುಷ್ಠಾನ ಕುರಿತು ವಿಚಾರಣೆ ನಡೆಸಿ ದಿನಾಂಕ : 10.06.2021 ರಂದು ಗುತ್ತಿಗೆದಾರರ ಪರವಾಗಿ ಪಾವತಿ ವಿಳಂಬ, ವಿಳಂಬಕ್ಕೆ ದಂಡ, ಪ್ರೈಸ್ ಎಸ್ಕಲೇಷನ್ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ನಿಗಮದಿಂದ ಸುಮಾರು ರೂ. 191.03 ಕೋಟಿಗಳನ್ನು ಪಾವತಿಸಲು ಅವಾರ್ಡ್ ಮಾಡಲಾಗಿರುತ್ತದೆ.

➢ ಆರ್ಬಿಟ್ರೇಶನ್ ಅವಾರ್ಡ್‌ಗೆ ಸಂಬಂಧಿಸಿದಂತೆ ಮಾನ್ಯ ವಾಣಿಜ್ಯ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ತೀರ್ಪಿಗೆ ನ್ಯಾಯಾಲಯವು ದಿನಾಂಕ : 26.07.2021 ರಂದು ತಡೆಯಾಜ್ಞೆ ನೀಡಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

➢ ಗುತ್ತಿಗೆದಾರರು ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ಬರೆದಿರುವ ದಿನಾಂಕ: 07.02.2022 ರ ಪತ್ರದಲ್ಲಿ ಈ ಕೆಳಕಂಡ ರಿಯಾಯಿತಿಗಳನ್ನು ನೀಡಿರುತ್ತಾರೆ:

1. ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಮೊತ್ತದ ಮೇಲಿನ ಪೂರ್ಣ ಬಡ್ಡಿ ಮೊತ್ತ ಬಿಟ್ಟುಕೊಡಲು
2. ಹಾಗೂ ದರ ಹೊಂದಾಣಿಕೆಯಲ್ಲಿ ಶೇ.10 ರಷ್ಟು ರಿಯಾಯಿತಿ ನೀಡಲು ಒಪ್ಪಿರುತ್ತಾರೆ. ಗುತ್ತಿಗೆದಾರರು ನೀಡಿರುವ ರಿಯಾಯಿತಿಗಳನ್ನು ಪರಿಗಣಿಸಿದಾಗ, ಗುತ್ತಿಗೆದಾರರಿಗೆ ಸುಮಾರು ರೂ. 126.34 ಕೋಟಿಗಳಷ್ಟು ಪಾವತಿಸಬೇಕಾಗುತ್ತದೆ.

➢ ದಿನಾಂಕ: 04.04.2022 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ ನಂತರ, ಮೇಲಿನ ಅಂಶಗಳ ಬಗ್ಗೆ ದಿನಾಂಕ: 12.05.2022 ರಂದು ನಡೆದ ಸಚಿವ ಸಂಪುಟ ಸಭೆಯ ಅನುಮೋದನೆಗೆ ಸಲ್ಲಿಸಿದ ಸಂದರ್ಭದಲ್ಲಿ ಸಚಿವ ಸಂಪುಟ ಚರ್ಚಿಸಿ, ಸಚಿವ ಸಂಪುಟ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿರುತ್ತದೆ:

- ರೂ. 862.37 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ. 250.20 ಕೋಟಿಗಳ ಸಾಲದ ನೆರವು, ನಬಾರ್ಡ್ ಸಾಲ ಮರುಪಾವತಿಗಾಗಿ ರೂ. 240.51 ಕೋಟಿಗಳ ಆರ್ಥಿಕ ಸಹಾಯ, ರೂ. 126.34 ಕೋಟಿಗಳನ್ನು ಗುತ್ತಿಗೆದಾರರಿಗೆ ಪಾವತಿಸಲು ನೆರವು ನೀಡುವುದು.

- ಕಾಮಗಾರಿಗಳ ಸಮೀಕ್ಷೆ ನಡೆಸಿ ಅಪೂರ್ಣಗೊಂಡಿರುವ ಕಟ್ಟಡಗಳ ವಿವಿಧ ಹಂತಗಳನ್ನು ಗುರುತಿಸಿ ಪಟ್ಟಿ ಮಾಡಲು ಇಲಾಖೆಗೆ ಸೂಚಿಸಿತು.

- ಮಧ್ಯಸ್ಥಿಕೆ ಕ್ಲೈಮ್‌ಗಳನ್ನು (Arbitration Award) ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳ ಕುರಿತು ಪರಾಮರ್ಶಿಸಿ ಮುಂದೆ ಯಾವ ಕ್ರಮ ಕೈಗೊಳ್ಳಬಹುದೆಂಬ ಕುರಿತು ಸಚಿವ ಸಂಪುಟಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಒಂದು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲು ಸಚಿವ ಸಂಪುಟವು ನಿರ್ಧರಿಸಿತು. ಸದರಿ ಉಪ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನಿರ್ಧರಿಸಲು ಮುಖ್ಯ ಮಂತ್ರಿಗಳಿಗೆ ಅಧಿಕಾರ ನೀಡಿತು.

- ಪ್ರಕರಣದ ಕುರಿತು ತನಿಖೆ ಮಾಡಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸುವಂತೆ ಸಚಿವ ಸಂಪುಟವು ಇಲಾಖೆಗೆ ಸೂಚಿಸಿತು.

- ದಿನಾಂಕ: 12.05.2022 ರ ಸಚಿವ ಸಂಪುಟ ಸಭೆಯ ನಿರ್ಣಯದಂತೆ, ದಿನಾಂಕ: 29.06.2022 ರಂದು ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ, ಮಾನ್ಯ ಲೋಕೋಪಯೋಗಿ ಸಚಿವರ ಮತ್ತು ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿ ಸಚಿವ ಸಂಪುಟದ ತೀರ್ಮಾನದಂತೆ, ಸಚಿವ ಸಂಪುಟದಲ್ಲಿ ಚರ್ಚಿಸಿದ ಅಂಶಗಳನ್ನು ಚರ್ಚಿಸಿ ಸಚಿವ ಸಂಪುಟಕ್ಕೆ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಲಾಗಿರುತ್ತದೆ:

    1. ರೂ. 862.37 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ,
    2. ರೂ. 126.34 ಕೋಟಿಗಳನ್ನು ಗುತ್ತಿಗೆದಾರರಿಗೆ ಪಾವತಿಸುವುದು,
    3. ಬಾಕಿ ಕಾಮಗಾರಿಗಳನ್ನು 9 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ರೂ. 250.20 ಕೋಟಿಗಳ ಸಾಲದ ನೆರವು,
    4. ನಿಗಮವು ಪ್ರಸ್ತುತ ಸಾಲಗಳನ್ನು ಮರುಪಾವತಿಸುವವರೆಗೆ ಹೊಸ ಉಗ್ರಾಣಗಳನ್ನು ನಿರ್ಮಿಸಬಾರದು.

- ಸಚಿವ ಸಂಪುಟ ಉಪಸಮಿತಿಯು ಶಿಫಾರಸ್ಸು ಮಾಡಿರುವಂತೆ ದಿನಾಂಕ: 14.09.2022 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಮೇಲ್ಕಂಡ ಅಂಶಗಳಿಗೆ ಅನುಮೋದನೆ ನೀಡಲಾಗಿದ್ದು, ಆಡಳಿತಾತ್ಮಕ ಲೋಪಗಳ ಕುರಿತು ತನಿಖೆಗಾಗಿ ಪ್ರಕರಣವನ್ನು ಲೋಕಾಯುಕ್ತ ಸಂಸ್ಥೆಗೆ ವಹಿಸಲು ಅನುಮೋದಿಸಲಾಗಿರುತ್ತದೆ.

- ಸಚಿವ ಸಂಪುಟದ ನಿರ್ಣಯದಂತೆ ಸರ್ಕಾರವು ದಿನಾಂಕ: 11.10.2022 ರಂದು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಯೋಜನೆಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

- ಸರ್ಕಾರದ ಆಡಳಿತಾತ್ಮಕ ಅನುಮೋದನೆಯಂತೆ, ಮೆ|| ಸೋಮ ಎಂಟರ್ ಪ್ರೈಸಸ್ ಲಿ. ರವರೊಂದಿಗೆ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಂಬಂಧ ಪೂರಕ ಒಪ್ಪಂದ ಮಾಡಿಕೊಂಡು ಈ ಯೋಜನೆಯಡಿಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ನಿಗಮಕ್ಕೆ ದಿನಾಂಕ:23-05-2023 ರ ಪತ್ರದಲ್ಲಿ ಸರ್ಕಾರವು ತಿಳಿಸಲಾಗಿರುತ್ತದೆ. ಅದರಂತೆ ಪೂರಕ ಕರಡು ಒಪ್ಪಂದವನ್ನು M/s Pragathi Law Chambers Bangalore ರವರಿಂದ ಸಿದ್ಧಪಡಿಸಲಾಗಿರುತ್ತೆ.

- ನಿಗಮವು ಗುತ್ತಿಗೆದಾರರೊಂದಿಗೆ ಪೂರಕ ಒಪ್ಪಂದವನ್ನು ಮಾಡಿಕೊಂಡು, ಬಾಕಿ ಉಳಿದಿರುವ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ:26.06.2023 ರಂದು ನಡೆದ ನಿಗಮದ ಮಂಡಳಿ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುತ್ತಿದೆ.

K. N. Rajanna

(ಕೆ.ಎನ್. ರಾಜಣ್ಣ)
ಸಹಕಾರ ಸಚಿವರು

ಸಂಖ್ಯೆ : CO 27 WHC 2023